**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ಸಿ.ಸಿ. ಸಂಖ್ಯೆ:1263/2024 (ಪಿ.ಡಬ್ಲ್ಯೂ-1)**

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 23.06.2026.**

**ಪಾಟೀ ಸವಾಲು : ಶ್ರೀ . ಎಸ್.ಪಿ.ವಿ ವಕೀಲರಿಂದ, ಆರೋಪಿ ಪರವಾಗಿ**

ನಾನು ಪಿಯುಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ನಾನು ಪ್ರಸ್ತುತ ಎಸ್. ಬಸವನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ಆರೋಪಿಯು ಮತ್ತಿಹಳ್ಳಿ ಭೋವಿ ಕಾಲೋನಿಯಲ್ಲಿ ವಾಸವಿದ್ದಾರೆ. ನನ್ನ ಹಾಗೂ ಆರೋಪಿಯ ಊರಿಗೆ ಸುಮಾರು 2 ಕಿ.ಮೀ ಅಂತರವಿದೆ. ಈ ದಿನಕ್ಕೆ ಆರೋಪಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯವಿದ್ದಾರೆ. ಆರೋಪಿ ಮೂಲತಃ ಕೃಷಿಕರು ಎಂದರೆ ಸರಿ. ವ್ಯವಸಾಯ ಚಟುವಟಿಕೆಗಳನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿ.

ನಾನು ಆರೋಪಿಗೆ ನೀಡಿದ ನೋಟಿಸಿನಲ್ಲಿ ಆರೋಪಿ ವ್ಯವಹಾರ ಮಾಡುತ್ತಾರೆ ಎಂದು ತಿಳಿಸಿದ್ದೇನೆ ಎಂದರೆ ಸಾಕ್ಷಿಯು ಆರೋಪಿಯು ಶುಂಠಿ ವ್ಯಾಪಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಭೂಮಿಯನ್ನು ಗೇಣಿಗೆ ಪಡೆದು ಶುಂಠಿ ಬೇಸಾಯ ಮಾಡುತ್ತಾರೆ ಎಂದರೆ ಸರಿ. ನನಗೆ ಆರೋಪಿಯ ಸ್ನೇಹಿತರು ಮತ್ತು ಅವರ ಕುಟುಂಬಸ್ಥರು ಪರಿಚಯವಿರುವುದಿಲ್ಲ. ಆರೋಪಿಯ ಅಣ್ಣನ ಮಗ ಮಂಜುನಾಥ ಪರಿಚಯವಿಲ್ಲ. ನಾನು ಮಂಜುನಾಥ ಬಳಿ ಯಾವುದೇ ವ್ಯವಹಾರ ಮಾಡಿಲ್ಲ. ಆರೋಪಿಯ ಹೆಂಡತಿಯ ಮಾವನ ಮಗನಾದ ವಿಜಯಕುಮಾರ ಪರಿಚಯವಿಲ್ಲ.

ವಿಜಯಕುಮಾರ ರವರು ಮೂಲತಃ ಅರಸೀಕೆರೆ ತಾಲ್ಲೂಕು ಬೈರಾಂಬೂದಿ ಗ್ರಾಮದವರಾಗಿದ್ದರು ಎಂದರೆ ಗೊತ್ತಿಲ್ಲ. ಅವರ ಜೊತೆ ಯಾವುದೆ ವ್ಯವಹಾರ ಮಾಡಿರುವುದಿಲ್ಲ.

ದಿಃ 15.02.2024 ರಂದು ಆರೋಪಿಯು ಒಬನೇ ಹಣ ಬೇಕೆಂದು ನನ್ನ ಮನೆಗೆ ಬಂದು ಬೇಡಿಕೆ ಇಟ್ಟಿದ್ದರು. ನಾನು ಆರೋಪಿಗೆ ಸದರಿ ದಿನಾಂಕದಂದು ಹಣ ಕೊಡುವ ಪೂರ್ವದಲ್ಲಿ ಎರಡು ಬಾರಿ ಆರೋಪಿಗೆ ಹಣ ನೀಡಿದ್ದು, ಸದರಿ ಒಂದು ಲಕ್ಷ ಒಮ್ಮೆಗೆ ಹಾಗೂ ಮತ್ತೊಮ್ಮೆ 50 ಲಕ್ಷ ಹಣವನ್ನು ಹಿಂತಿರುಗಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ಈ ಮೊದಲು ಆರೋಪಿಗೆ ಹಣ ನೀಡಿದಾಗ ಆತನಿಂದ ಚೆಕ್ಕನ್ನು ಪಡೆದಿರಲಿಲ್ಲ. ನಾನು ದಿಃ 15.02.2024 ರಂದು ಆರೋಪಿಗೆ ಹಣ ನೀಡಿರಲಿಲ್ಲ. ಸದರಿ ದಿನಾಂಕದಂದು ನನ್ನ ಬಳಿ ಹಣ ಇರಲಿಲ್ಲ, ಆದುದರಿಂದಾಗಿ ಆ ದಿನ ಆರೋಪಿಗೆ ಹಣ ನೀಡಲಿಲ್ಲ ಎಂದು ನುಡಿಯುತ್ತಾರೆ. ನಂತರ ನಾನು ದಿಃ 19.02.2024 ರಂದು ರೂ. 5 ಲಕ್ಷ ಹಣವನ್ನು ಆರೋಪಿಗೆ ಹಣ ನೀಡಿದೆ ಎಂದು ನುಡಿಯುತ್ತಾರೆ. ನಾನು 500/- ಮುಖ ಬೆಲೆಯ 10 ಕಟ್ಟುಗಳನ್ನು ನೀಡಿದ್ದೇನೆ. ಆರೋಪಿ ನಗದು ಬೇಕೆಂದು ಕೇಳಿದ್ದರು, ಅದಕ್ಕೆ ನಾನು ಮನೆ ರಿಪೇರಿಗೆಂದು ಹೊಂದಿಸಿಟ್ಟ ಹಣವನ್ನು ಆರೋಪಿಗೆ ನೀಡಿದ್ದೆ ಎಂದು ನುಡಿಯುತ್ತಾರೆ.

ದಿಃ 15.02.2024 ರಂದು ನನ್ನ ಬಳಿ 5 ಲಕ್ಷ ಹಣವಿಲ್ಲ ಎಂದು ನುಡಿದಿದ್ದು, ಹಾಗಾದರೆ ದಿಃ 19.02.2024 ರಂದು 5 ಲಕ್ಷ ಹಣವು ನಿಮ್ಮ ಬಳಿ ಹೇಗೆ ಬಂದಿತ್ತು ಎಂದರೆ ಸಾಕ್ಷಿಯು ಕೊಬ್ಬರಿ ಮಾರಿದ ಹಣ, ಹಾಲು ಮಾರಿದ ಹಣ ಮತ್ತು ವ್ಯವಸಾಯದ ಹಣದಿಂದ

ಹೊಂದಿಸಿ ಆರೋಪಿಗೆ 5 ಲಕ್ಷ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಸುಮಾರು 2-3 ತಿಂಗಳುಗಳ ಕಾಲ ಕೊಬ್ಬರಿಯನ್ನು ಮಂಡಿಯಲ್ಲೆ ಬಿಟ್ಟಿರುತ್ತೇನೆ. ಸಿಂಗಟಗೆರೆಯಲ್ಲಿ ಶಶಿಧರ ಎಂಬ ಸಹೋದರನ ಮಂಡಿಗೆ ಕೊಬ್ಬರಿಯನ್ನು ಬಿಡುತ್ತೇನೆ ಎಂದು ನುಡಿಯುತ್ತಾರೆ. ಕೊಬ್ಬರಿ ಬಿಟ್ಟಾಗ ಸದರಿ ವ್ಯವಹಾರವನ್ನು ಬರವಣಿಗೆ ಮಾಡುತ್ತಾರೆ ಎಂದರೆ ಸರಿ. ಶಶಿಧರರವರು ನನಗೆ ನಗದು ನೀಡಿದ್ದರು. ಹಾಲಿನ ಹಣವನ್ನು ಬ್ಯಾಂಕಿಗೆ ಸಂದಾಯ ಮಾಡುತ್ತಾರೆ ಎಂದರೆ ಸರಿ. ನಾನು ದಿಃ 15.02.2024 ರಿಂದ ದಿಃ 19.02.2024 ರಲ್ಲಿ ಸುಮಾರು 50 ಸಾವಿರ ಹಣವನ್ನು ಹಾಲು ಮಾರಿ ಪಡೆದಿರುತ್ತೇನೆ. ನಾನು ಕರ್ನಾಟಕ ಬ್ಯಾಂಕ್ ಕೆ. ಬಿದರೆ ಶಾಖೆಯಲ್ಲಿ ವ್ಯವಹಾರ ಮಾಡುತ್ತೇನೆ. 50 ಸಾವಿರಗಳಿಗೆ ಹಾಲು ಮಾರಿ ಹಣ ಪಡೆದ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ಆಯಾ ತಿಂಗಳಿನಲ್ಲಿ ಹಣ ಪಡೆದು, ಮನೆಯಲ್ಲಿ ಇಟ್ಟುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

ಕೊಬ್ಬರಿಯನ್ನು ಪಡೆದಿರುವ ಬಗ್ಗೆ ಶಶಿಧರ ರವರಿಂದ ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ.ಶಶಿಧರ ರವರು ನಮ್ಮ ತೋಟದ ಕೊಬ್ಬರಿಯನ್ನು ಯಾವ ಮಂಡಿಗೆ ಬಿಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ.

ಆರೋಪಿಯು ಜಮೀನುಗಳನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ಗೇಣಿಗೆ ಪಡೆದು ಶುಂಠಿ ಬೆಳೆಯುತ್ತಾರೆ ಎಂದರೆ ಸರಿ. ಆರೋಪಿಯು ಜಮೀನುಗಳನ್ನು ಶುಂಠಿ ಬೆಳೆಯಲು ರೈತರಿಂದ ಪಡೆದಾಗ ಖರ್ಚುಗಳಿಗಾಗಿ ಜನರಿಂದ ಸಾಲ ಪಡೆಯುತ್ತಾರೆ ಎಂದರೆ ಗೊತ್ತಿಲ್ಲ. ಭೂಮಿ ಹದ ಮಾಡಲು ಮತ್ತು ಕೈಸಾಲ ತೀರಿಸಲು ಹಣ ಬೇಕೆಂದು ಕೋರಿದ್ದು, ಸದರಿ

ಹಣವನ್ನು ಒಂದು ತಿಂಗಳಲ್ಲಿ ಹಿಂತಿರುಗಿಸಲು ಆರೋಪಿಯು ಒಪ್ಪಿದ್ದರು ಎಂದು ನುಡಿಯುತ್ತಾರೆ.

ನಾನು ಆರೋಪಿಗೆ ನನ್ನ ಮನೆಯಲ್ಲಿ ಹಣ ನೀಡಿದ್ದು, ಆ ಸಮಯದಲ್ಲಿ ನಾನು ಮತ್ತು ಆರೋಪಿ ಇದ್ದೆವು. ಆರೋಪಿಯು ಈ ಹಿಂದಿನ ವ್ಯವಹಾರ ಸಂಬಂಧದ ಹಣವನ್ನು ನನಗೆ ನಗದಾಗಿ ನೀಡಿರುತ್ತಾರೆ. ನಾವು ಎಂದಿಗೂ ಸಹ ಹಣದ ವ್ಯವಹಾರವನ್ನು ಬ್ಯಾಂಕಿನ ಮೂಲಕ ನಡೆಸಿಲ್ಲ. ಆರೋಪಿಯು ಪಡೆದ ಹಣವನ್ನು ಹಿಂತಿರುಗಿಸುತ್ತಾರೆ ಎಂದರೆ ಸರಿ.

2020 ಲಾಕ್ ಡೌನ್ ಸಮಯದಲ್ಲಿ ಆರೋಪಿಯು ನನ್ನಿಂದ 2,50,000/- ಹಣವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ಆರೋಪಿಯು ನಿಪಿ-1 ಚೆಕ್ಕು ನೀಡಿದ್ದರು ಎಂದರೆ ಸರಿಯಲ್ಲ. ಬೆಳೆಯಿಂದ ಹಣ ಬಂದಾಗ ದಿಃ 20.11.2021 ರಂದು ಆರೋಪಿಯ ಅಣ್ಣನ ಮಗನಾದ ಮಂಜುನಾಥ ರವರ ಕಡೆಯಿಂದ ಫೋನ್ ಪೇ ಮೂಲಕ ನನ್ನ ಖಾತೆಗೆ 49,800/- ಹಣವನ್ನು ಜಮಾ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ದಿಃ 11.02.2024 ರಂದು ಆರೋಪಿಯ ಹೆಂಡತಿಯ ಮಾವನ ಮಗ ವಿಜಯ ಕುಮಾರ್ ರವರ ಖಾತೆಯ ಮೂಲಕ 70,000/- ಹಣವನ್ನು ಜಮಾ ಮಾಡಿದ್ದಾರೆ ಎಂದರೆ ಸಾಕ್ಷಿಯು 70,000/- ರೂ ಹಣ ಬಂದಿರುತ್ತದೆ. ಆದರೆ ಸದರಿ ಹಣವನ್ನು ಆರೋಪಿಯೇ ವರ್ಗಾಹಿಸಿದ್ದಾರೆ ಎಂಬುದಕ್ಕೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 12.02.2024 ರಂದು ವಿಜಯ ಕುಮರ್ ರವರ ಖಾತಯಿಂದ

80,000/- ಹಣವನ್ನು ನನ್ನ ಖಾತೆಗೆ ಆರೋಪಿಯು ಜಮಾ ಮಾಡಿಸಿದ್ದಾನೆ ಎಂದರೆ ಆ ಹಣಕ್ಕು ಈ ವ್ಯವಹಾರಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

ಸದರಿ ಮಂಜುನಾಥ ಮತ್ತು ವಿಜಯ ಕುಮಾರ ರವರು ಆರೋಪಿಯ ಶುಂಠಿ ವ್ಯವಹಾರದಲ್ಲಿ ಭಾಗಿಯಾಗುತ್ತಾರೆ ಎಂದರೆ ಸರಿಯಲ್ಲ. ದಿಃ 13.02.2024 ರಂದು ಆರೋಪಿಯು ಖುದ್ದಾಗಿ ಬಂದು ಉಳಿಕೆ ಒಂದು ಲಕ್ಷ ಹಣವನ್ನು ನಗದು ಮೂಲಕ ನನಗೆ ಸಂದಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಅತಿಯಾದ ಬಡ್ಡಿ ವ್ಯಾಮೋಹದಿಂದ ಹೆಚ್ಚಿನ ಬಡ್ಡಿಗೆ ಬೇಡಿಕೆ ಇಟ್ಟಿದ್ದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.